**ಸಾಕ್ಷಿಯನ್ನು ದಿನಾಂಕ 11-01-2024 ರಂದು ನ್ಯಾಯಾಲಯದ ಆದೇಶದ ಪ್ರಕಾರ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್.ಎಲ್.ಹೆಚ್. ವಕೀಲರಿಂದಃ**

ನಾನು ಈಗಾಗಲೇ ಸಲ್ಲಿಸಿರುವ ದಾಖಲೆಗಳಿಗೆ ಹೆಚ್ಚುವರಿಯಾಗಿ ನ್ಯಾಯಾಲಯ ಅನುಮತಿ ಪಡೆದು ಈ ದಿನ ಎರಡು ತೆರಿಗೆ ಬಾಕಿ ರಿಜಿಸ್ಟರು ದಾಖಲೆಗಳು, ಪಿಡಿಓ ರವರು ಕೊಟ್ಟಿರುವ ಹಿಂಬರಹ ಮತ್ತು ನಕಾಶೆಯನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕ್ರಮವಾಗಿ ನಿ.ಪಿ. 4 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 1, 2, 4 ಮತ್ತು 5 ನೇ ಪ್ರತಿವಾದಿಯ ಪರ ಶ್ರೀ ಎಸ್.ಬಿ.ಕೆ. ವಕೀಲರಿಂದಃ**

ನಮ್ಮ ಊರಿನಲ್ಲಿ ಮಸ್ತಾನ ಸಾಬ ಎಂಬ ಇಬ್ಬರು ವ್ಯಕ್ತಿಗಳು ಇದ್ದೇವೆ. ನನ್ನ ತಂದೆಯ ಹೆಸರು ಹಮೀದ ಪಟೇಲ್. ನನ್ನ ಹೆಸರಿನವನೇ ಆದ ಮತ್ತೊಬ್ಬ ಮಸ್ತಾನ ಸಾಬ ತೀರಿಕೊಂಡಿದ್ದಾನೆ. ಮೃತ ಮಸ್ತಾನ ಸಾಬನ ಆಸ್ತಿ ಈಗ 1 ನೇ ಪ್ರತಿವಾದಿ ಮೌಲಾನಾ ಪಟೇಲ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ನಾನು ಸದರಿ ಆಸ್ತಿಯನ್ನು 2007 ರಲ್ಲಿ ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಮತ್ತು 1 ನೇ ಪ್ರತಿವಾದಿಯೆ ಮಸ್ತಾನ ಸಾಬ ತೀರಿಕೊಂಡ ದಿನದಿಂದ ಇಲ್ಲಿಯವರೆಗೆ ಸದರಿ ಸ್ವತ್ತಿನ ಮಾಲೀಕನಾಗಿ ಅದರಿ ಸ್ವಾಧೀನದಲ್ಲಿದ್ದಾನೆ ಎನ್ನುವುದು ಸರಿಯಲ್ಲ.

ಮಸ್ತಾನ ಸಾಬ ತೀರಿಕೊಳ್ಳುವ ಮೊದಲು ಮತ್ತು 2007 ರಲ್ಲೇ ದಾವಾ ಸ್ವತ್ತನ್ನು ಆತನಿಂದ ಖರೀದಿ ಮಾಡಿದ್ದೇನೆ ಎನ್ನಲಾದ ನಂತರ ನೀವೇನಾದರೂ ಸದರಿ ಖರೀದಿಯಂತೆ ಪಂಚಾಯತಿಯಲ್ಲಿ ದಾವಾ ಸ್ವತ್ತಿನ ದಾಖಲೆಗಳನ್ನು ನಿಮ್ಮ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ಆದೇಶ ಮಾಡಿಸಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾರೇ ಜಮೀನು ಅಥವಾ ಪ್ಲಾಟು ಖರಿದಿ ಮಾಡಿದರೂ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಲು ಸಂಬಂದಪಟ್ಟ ಇಲಾಖೆಗೆ ಅರ್ಜಿ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಹಳ್ಳಿ ಕಡೆ ಯಾರೂ ಆ ರೀತಿ ಕ್ರಮ ಕೈಗೊಳ್ಳುವುದಿಲ್ಲ ಎನ್ನುತ್ತಾರೆ.

ನಿಪಿ-4 ಮತ್ತು 5 ರ ದಾಖಲೆಗಳಲ್ಲಿ ನನ್ನ ಹೆಸರನ್ನು ಕಾನೂನು ಬಾಹಿರವಾಗಿ ನಮೂದು ಮಾಡಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವುದೇ ದಾಖಲೆ ದಾವಾ ಸ್ವತ್ತಿನ ಮೇಲೆ ನನ್ನ ಮಾಲೀಕತ್ವವನ್ನು ರುಜುಮಾತು ಪಡಿಸುವ ದಾಖಲೆಗಳು ಅಲ್ಲ ಎನ್ನುವುದು ಸರಿಯಲ್ಲ. ನಿಪಿ-7 ರ ದಾಖಲೆಯ ಮೇಲೆ ಪಂಚಾಯತಿ ಅಧ್ಯಕ್ಷರ ಸಹಿ ಅಥವಾ ಕಾರ್ಯಾಲಯದ ಸೀಲು ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ.**